

# ಹಾರುವ ಮನುಷ್ಯ




ಮನುಷ್ಯ ಆಗಸದಲ್ಲಿ ಹಾರುವ ಕನಸನ್ನು ವಿಮಾನ, ಹೆಲಿಕಾಪ್ಟರ್ ಮೂಲಕ ನನಸು ಮಾಡಿಕೊಂಡು ಬಹಳಷ್ಟು ವರ್ಷಗಳೇ ಕಳೆದವು. ಆದರೆ ಯಾವುದೇ ವಾಹನಗಳನ್ನು ಬಳಸದೇ ಸ್ವತಃ ಹಕ್ಕಿಯಂತೆ ಸ್ವಚ್ಛಂದವಾಗಿ ಕೈಕಾಲು ಬೀಸಿಕೊಂಡು ತೇಲುತ್ತ, ಮನೆಯಿಂದ ಕಚೇರಿಗೋ, ಶಾಪಿಂಗ್‌ಗೋ, ತೋಟಕ್ಕೋ ತೆರಳುವ ಹಾಗಿದ್ದರೆ... ಬ್ರಿಟನ್ನಿನ ಸಂಶೋಧಕ ರಿಚರ್ಡ್ ಬ್ರೌನಿಂಗ್ ಇಂತಹದೊಂದು ಸಾಧನೆ ಮಾಡಿ ತೋರಿಸಿದ್ದಾರೆ. 'ಅಯರ್ನ್ ಮ್ಯಾನ್' ಶೈಲಿಯ ಸೂಟ್ ಧರಿಸಿ ಆಕಾಶದಲ್ಲಿ ಸ್ವತಂತ್ರವಾಗಿ ಹಾರಾಡಿ ಬೆರಗು ಮೂಡಿಸಿದ್ದಾರೆ.

ಈ ಸೂಟ್‌ಗೆ 6 ಗ್ಯಾಸ್ ಟರ್ಬೈನ್ ಎಂಜಿನ್‌ಗಳನ್ನು ಜೋಡಿಸಲಾಗಿದ್ದು, ಒಟ್ಟು 800 ಎಚ್‌ಪಿ ಇಂಧನವನ್ನು ಉತ್ಪಾದಿಸುತ್ತವೆ. ಈ ಎಂಜಿನ್‌ಗಳನ್ನು ವ್ಯಕ್ತಿಯ ಹಿಂಭಾಗ, ಎರಡೂ ಕೈಗಳಿಗೆ ಬರುವಂತೆ ಜೋಡಿಸಲಾಗಿದೆ. ಕೈಯಲ್ಲಿ ಹಿಡಿಯುವ ಸಾಧನದಿಂದ ಇಂಧನ ಉತ್ಪಾದನೆಯನ್ನು ನಿಯಂತ್ರಿಸಬಹುದು. ಈ ಸೂಟ್ ಧರಿಸಿ ಸಾವಿರಾರು ಅಡಿ ದೂರದವರೆಗೆ ಗಂಟೆಗೆ 450 ಕಿ.ಮೀ. ವೇಗದಲ್ಲಿ ಹಾರಾಡಬಹುದು. ಸ್ವತಃ ರಿಚರ್ಡ್ ಪ್ರಾಯೋಗಿಕವಾಗಿ ಹಾರಾಡಿ ಸಾಬೀತುಪಡಿಸಿದ್ದಾರೆ.

ಇಂಗ್ಲೆಂಡ್‌ನ ಸಾಮರ್‌ಸೆಟ್‌ನಲ್ಲಿ ಗ್ರೇವಿಟಿ ಎಂಬ ನವೋದ್ಯಮ ಆರಂಭಿಸಿರುವ ವರ್ತಕ ರಿಚರ್ಡ್‌ಗೆ ಎಂಜಿನಿಯರಿಂಗ್ ಗಂಧಗಾಳಿಯೂ ಇಲ್ಲ. ಆದರೆ ತನ್ನ ಗ್ಯಾರೇಜ್‌ನಲ್ಲಿ ಸ್ನೇಹಿತರ ಜೊತೆ ಸೇರಿ ಈ ಸೂಟ್ ತಯಾರಿಸಿದ್ದು ಆಕಸ್ಮಿಕವಾಗಿ. ಎಂಜಿನ್‌ಗೆ 12 ಲೀಟರ್ ಡೀಸೆಲ್ ಸಾಕಂತೆ. ಆದರೆ ಸೂಟ್ ತಯಾರಿಕೆ ದುಬಾರಿ ಬಾಬ್ತು ಎಂದಿದ್ದಾರೆ ರಿಚರ್ಡ್. ಅಮೆರಿಕದ ಮಿಲಿಟರಿ ಈ ಸಂಶೋಧನೆಯಲ್ಲಿ ಆಸಕ್ತಿ ತೋರಿಸಿದ್ದು, ಆರ್ಥಿಕ ನೆರವನ್ನೂ ನೀಡಿದೆ. ಕೆಲವು ಮನರಂಜನೆ ಉದ್ಯಮಗಳು ಕೂಡಾ ಕುತೂಹಲ ವ್ಯಕ್ತಪಡಿಸಿವೆಯಂತೆ.

■ ಎಸ್.ಹೆಗಡೆ